# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1045 |
| ಸದಸ್ಯರ ಹೆಸರು | ಶ್ರೀ ಎಸ್.ರವಿ |
| ಉತ್ತರಿಸುವ ದಿನಾಂಕ | 18.12.2024 |
| ಉತ್ತರಿಸುವವರು | ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು. ಮುಡುಕುತೊರೆ ಶ್ರೀ ಭ್ರಮರಾಂಭಿಕ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿ ನೆಡೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು ಮುಡುಕುತೊರೆ ಶ್ರೀ ಭ್ರಮರಾಂಭಿಕ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನವು ಸಂಪೂರ್ಣ ಶಿಥಿಲವಾಗಿದ್ದ ಕಾರಣ ಜೀರ್ಣೋದ್ಧಾರಗೊಳಿಸಲು ಕಳೆದ 2-3 ವರ್ಷಗಳ ಹಿಂದೆ ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ಕ್ರಮ ವಹಿಸಿ ಜೀರ್ಣೋದ್ಧಾರ ಕಾಮಗಾರಿ ಕೈಗೊಂಡಿದ್ದು, ಸದರಿ ಕಾಮಗಾರಿಯ ಅಳತೆ ಮತ್ತು ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬಂದ ಕಾರಣ ಕಾಮಗಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. |
| ಆ) | ಹಾಗಿದ್ದಲ್ಲಿ, ಸದರಿ ಕಾಮಗಾರಿಗೆ ಮಂಜೂರಾಗಿರುವ ಅನುದಾನ ಎಷ್ಟು; ಕಾಮಗಾರಿಯ ಗುತ್ತಿಗೆಯನ್ನು ಯಾವ ಸಂಸ್ಥೆ ವಹಿಸಲಾಗಿದೆ; ಗುತ್ತಿಗೆ ಕಾಲಾವಧಿ ಎಷ್ಟು; ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ: ಕಾಮಗಾರಿಯೂ ಮಂದಗತಿಯಲ್ಲಿ ಸಾಗಲು ಕಾರಣಗಳೇನು; | ಮೈಸೂರು ಜಿಲ್ಲೆ, ಟಿ.ನರಸೀಪುರ ತಾಲ್ಲೂಕು, ಮುಡುಕುತೊರೆ ಶ್ರೀ ಭ್ರಮರಾಂಭಿಕ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದ ಪುನರ್ ನಿರ್ಮಾಣ ಸಂಬಂಧ ಒಟ್ಟು ರೂ.1600.00 ಲಕ್ಷಗಳ ಅಂದಾಜುಪಟ್ಟಿಗೆ ಸರ್ಕಾರದ ಆದೇಶ ಸಂ: ಕಂಇ 12 ಮುಅಕಾ 2020 ದಿ: 21.11.2020 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಈ ಕಾಮಗಾರಿಯ ಗುತ್ತಿಗೆಯನ್ನು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದ್ದು, ಗುತ್ತಿಗೆ ಕಾಲಾವಧಿ ಸದರಿ ಇಲಾಖೆಗೆ ಸಂಬಂಧಿಸಿರುತ್ತದೆ. ಈ ಕಾಮಗಾರಿಯನ್ನು ಕೈಗೊಳ್ಳಲು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ.<br><br>ಕಾಮಗಾರಿಯಲ್ಲಿ ಅಳತೆ ಮತ್ತು ಪ್ರಮಾಣದಲ್ಲಿ ವ್ಯತ್ಯಾಸ ಕಂಡುಬಂದ ಕಾರಣ ಮುಜರಾಯಿ ಸಚಿವರು ಹಾಗೂ ಕರ್ನಾಟಕ ರಾಜ್ಯ ವಾಸ್ತು ಶಿಲ್ಪ ಸಮಿತಿಯವರು ದಿನಾಂಕ:21.08.2024ರಂದು ದೇವಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ದೇವಾಲಯದ ಹಿಂದಿನ ಅಭಿವೃದ್ಧಿ ಸಮಿತಿಯವರು/ಅಧಿಕಾರಿಗಳು/ಸಿಬ್ಬಂದಿಗಳು/ಗ್ರಾಮಸ್ಥರುಗಳು ವಿಭಿನ್ನ ಅಭಿಪ್ರಾಯ ತಿಳಿಸಿರುವ ಕಾರಣ ಈ ಹಿಂದೆ ಇದ್ದ ಅಳತೆ ಪ್ರಮಾಣಕ್ಕನುಗುಣವಾಗಿ ಜೀರ್ಣೋದ್ಧಾರಗೊಳಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿ ಎಲ್ಲರೂ ಸಹಮತಿಯನ್ನು ನೀಡಿರುವುದರಿಂದ ಈ ಹಿಂದೆ ಇದ್ದ ಅಳತೆ ಪ್ರಮಾಣಕ್ಕನುಗುಣವಾಗಿ ನೀಲನಕ್ಷೆ ರಚಿಸಿ ನಿಯಮಾನುಸಾರ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯಲು ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮುಖ್ಯ ವಾಸ್ತು ಶಿಲ್ಪಿಗಳು, ಲೋಕೋಪಯೋಗಿ ಇಲಾಖೆ ರವರಿಂದ ನೀಲನಕ್ಷೆ ತಯಾರಿಸಿದ್ದು, ವಾಸ್ತು ಶಿಲ್ಪ ಸಮಿತಿಯು ದಿನಾಂಕ: 05.10.2024ರಂದು ನಡೆದ ಸಭೆಯಲ್ಲಿ ನೀಲ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ. ಈ ಕಾರಣಗಳಿಂದ ಕಾಮಗಾರಿಯು ವಿಳಂಬವಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಸದರಿ ಕಾಮಗಾರಿಗೆ ಈವರೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು: ಖರ್ಚಾಗಿರುವ ಅನುದಾನ: ಎಷ್ಟು ಬಿಡುಗಡೆಯಾಗಲು ಬಾಕಿ ಇರುವ ಅನುದಾನ ಎಷ್ಟು: ಉಳಿಕೆ ಅನುದಾನವನ್ನು ಯಾವ ಕಾಲಮಿತಿಯಲ್ಲಿ ಬಿಡುಗಡೆಗೊಳಿಸಲಾಗುವುದು: (ವಿವರವನ್ನು ಒದಗಿಸುವುದು) | ಈ ದೇವಾಲಯದ ಕಾಮಗಾರಿಗಾಗಿ ಸರ್ಕಾರದಿಂದ 2013 ರ ಪಂಚಲಿಂಗ ದರ್ಶನ ಮಹೋತ್ಸವಕ್ಕೆ ಮಂಜೂರಾದ ಅನುದಾನದಲ್ಲಿ ಬಾಕಿ ಉಳಿದ ರೂ.240.00 ಲಕ್ಷಗಳನ್ನು ಬಳಸಿಕೊಳ್ಳಲು ಮಂಜೂರು ಮಾಡಿದ್ದು ಹಾಗೂ ಸಾಮಾನ್ಯ ಯೋಜನೆಯಡಿ ರೂ.100.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಹೀಗೆ ಒಟ್ಟು 340.00 ಲಕ್ಷಗಳ ಅನುದಾನವನ್ನು ಬಳಸಿಕೊಂಡು ಬಾಕಿ ಅನುದಾನವನ್ನು ಜೀರ್ಣೋದ್ಧಾರ ಸಮಿತಿಯವರು ಸಾರ್ವಜನಿಕ ವಂತಿಕೆಯಿಂದ ಪಡೆದ ಮೊತ್ತದೊಂದಿಗೆ ಹಾಗೂ ದೇವಾಲಯದ ನಿಶ್ಚಿತ ಠೇವಣಿಯಲ್ಲಿ ಇರಿಸಿರುವ ಮೊತ್ತದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಹಾಗೂ ದೇವಾಲಯದ ಸಮಿತಿಯವರು ಖುದ್ದು ಅವರೇ ಮಾಡುತ್ತಾರೆಂದು ತಿಳಿಸಿರುತ್ತಾರೆ. |
| ಈ) | ಮುಡುಕುತೊರೆ ಕ್ಷೇತ್ರವು ಶ್ರೀ ಭ್ರಮರಾಂಭಿಕ ಸಹಿತ ಮಲ್ಲಿಕಾರ್ಜುನಸ್ವಾಮಿಯ ದೇವಸ್ಥಾನವು ಇತಿಹಾಸ ಪ್ರಸಿದ್ಧ ಸ್ಥಳವಾಗಿದ್ದು, ಶ್ರೀಶೈಲಂನ ನಂತರದ ಸ್ಥಾನಮಾನ ಈ ದೇವಸ್ಥಾನವೆಂದು ಪ್ರತೀತಿಯಿದೆ. ಈ ಹಿನ್ನೆಲೆಯಲ್ಲಿ ಸದರಿ ದೇವಸ್ಥಾನದ ಪ್ರಾಧಿಕಾರ ರಚನೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ: (ಸಂಪೂರ್ಣ ಮಾಹಿತಿಯನು ನೀಡುವುದು) | ಶ್ರೀಕ್ಷೇತ್ರವು ಶ್ರೀಶೈಲಂನ ನಂತರದ ಸ್ಥಾನಮಾನದ ದೇವಾಲಯವೆಂದು, ಇತಿಹಾಸ ಪ್ರಸಿದ್ಧವಾಗಿರುತ್ತದೆ. ಈ ದೇವಸ್ಥಾನಕ್ಕೆ ಪ್ರಾಧಿಕಾರ ರಚನೆ ಮಾಡುವ ಕುರಿತು ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಸಂಖ್ಯೆ: ಕಂಇ 4 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು